ಇ) ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯು ಮೂಲಕ ಅರ್ಜಿಗಳನ್ನು ಕರೆಯಿಲಾಗಿದ್ದು ಶೀಘ್ರವೇ ಭರ್ತಿ ಮಾಡಲಾಗುವುದು.

ವಿಷಯ : ಜಿಲ್ಲೆಯ ಶಿಕ್ಷಣಾಧಿಕಾರಿಗಳಿಗೆ ವಾಹನ ಸೌಕರ್ಯವನ್ನೊದಗಿಸುವುದು

ಪ್ರಶ್ನೆ : 212(726) **ಶ್ರೀ ಪ್ರತಾಪ ಚಂದ್ರಶೆಟ್ಟಿ** (ಕುಂದಾಪುರ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಜಿಲ್ಲೆಯ ಉಪ ಶಿಕ್ಷಣಾಧಿಕಾರಿಗಳಿಗೆ ಹಾಗೂ ತಾಲ್ಲೂಕು ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವಿದ್ಯಾ ಸಂಸ್ಥೆಗಳನ್ನು ಪರಿವೀಕ್ಷಣೆ ಮಾಡಲು ವಾಹನ ಸೌಕರ್ಯವನ್ನೊದಗಿಸಲಾಗಿದೆಯೆ ;

ಆ) ಹಾಗಿಲ್ಲದಿದ್ದಲ್ಲಿ ಸದರಿ ಅಧಿಕಾರಿಗಳಿಗೆ ಪರಿವೀಕ್ಷಣೆ ಮಾಡಲು ಅನಾನುಕೂಲತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು ?

ಉತ್ತರ : **ಶ್ರೀ ಬಿ. ರಾಚಯ್ಯ** (ಶಿಕ್ಷಣ ಮಂತ್ರಿಗಳು).— ಅ) ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳಿಗೆ ವಾಹನಗಳನ್ನು ನೀಡಲಾಗಿದೆ. ತಾಲ್ಲೂಕು ಸಹಾಯಕ ಶಿಕ್ಷಣಾಧಿಕಾರಿಗೆ ವಾಹನಗಳನ್ನು ನೀಡಿಲ್ಲ.

ಆ) ಮತ್ತು ಇ) ತಾಲ್ಲೂಕು ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವಾಹನ ಒದಗಿಸಿದರೆ ಅನುಕೂಲವಾಗುತ್ತದೆ. ಹಣಕಾಸಿನ ತೊಂದರೆಯಿಂದ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಜೀಪುಗಳನ್ನು ಒದಗಿಸುವುದು ಸಾಧ್ಯವಾಗುವುದಿಲ್ಲ.

Mr. Speaker.— Answar laid

5 Papers Laid on the Table

Sri A. Lakshmisagar.— Sir, On behalf of the Hon. Chief Minister, I lay.

Order No. HD 268 CNA 83 dated 4th February, 1984.

Grant of exemption for the exhibition of 35 mm film by the principal, Sainik School, Bijapur in the auditorium of Sainik School, Bijapur ;

as required under Section 22 of the Karnataka Cinema (Regulation) Act 1964.

Mr. Speaker.— Papers laid

6 Presentation of Petition

Sri R.C. Balekundargi.— Sir, I present a Petition signed by representatives of Harnasikari Samaja regarding inclusion of certain castes under the category of Scheduled Tribes.

Mr. Speaker.— Petition presented.

7 Matters Under Rule 334

Mr. Speaker.— Now we will take up matters under rule 334.

Sri M.S. Krishnan.— will speak.

ವಿಷಯ : (i) ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ ಕೈಗಾರಿಕೆಯನ್ನು ಮುಚ್ಚಿರುವ ಬಗ್ಗೆ

ಶ್ರೀ ಎಂ ಎಸ್ ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಂಗಳೂರು ಕೆಮಿಕಲ್ ಅಂಡ್ ಫರ್ಟಿಲೈಸರ್ ಕೈಗಾರಿಕೆಯನ್ನು ಮುಚ್ಚಿದ್ದಾರೆಂದು ನಿನ್ನೆ ದಿನಪತ್ರಿಕೆಗಳಲ್ಲಿ ಬಂದಿದೆ. ಏಕೆಂದರೆ ವಿದ್ಯುಚ್ಛಕ್ತಿ ಅಭಾವದಿಂದ. ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲ, ವಿದ್ಯುಚ್ಛಕ್ತಿಯಮ್ನ ಕೊಡಿಸಿಕೊಡದಿದ್ದರಿಂದ. ಮುಚ್ಚಬೇಕಾದ ಪರಿಸ್ಥಿತಿ ಬಂದಿದೆ ಅಂತ ಹೇಳಿರುವುದು ನಿನ್ನೆಯ ಪತ್ರಿಕೆಗಳಲ್ಲಿ ಆದು ವರದಿಯಾಗಿದೆ. ಇದರಿಂದ ಇದು ಇವತ್ತಿನ ದಿವಸ ಸಾವಿರಾರು ಜನ ಕಾರ್ಮಿಕರಿಗೆ ಸಂಬಂಧಪಟ್ಟಂತಹ ಪ್ರಶ್ನೆಯಾಗಿದೆರೆ ಸಾವಿರಾರು ಕಾರ್ಮಿಕರಿಗೆ ಕೆಲಸ ಇಲ್ಲದಂತಾಗಿ, ನಿರುದ್ಯೋಗಿಗಳ ಬಾಯಿಗೆ ಸರ್ಕಾರವೇ ತಳ್ಳಿದ ಹಾಗೆ ಆಗುತ್ತದೆ. ಅದಕ್ಕಿಂತ ಹೆಚ್ಚಾಗಿ ಇದು ಒಂದು ಭಾರಿದೊಡ್ಡ ಆವ ನಮ್ಮ ರಾಜ್ಯದಲ್ಲಿ ಫರ್ಟಿ